**ಸಿ.ಸಿ ನಂ. 1867/2022**
DW : 01

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ ಶಹಾಪೂರ.

| | | |
|---|---|---|
| ಹೆಸರು | : | ಶೇಖ್ ಲಾಲ್ಡಿ |
| ತಂದೆ/ ಗಂಡನ ಹೆಸರು | : | ಲಾಲಅಹ್ಮದ್ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಶಹಾಪೂರ |

**ದಿನಾಂಕ: 13.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀಮತಿ.ಬಿ.ಎಫ್. ವಕೀಲರಿಂದ:**

2 ನೇ ಆರೋಪಿ ನನ್ನ ತಾಯಿ, 3 ಮತ್ತು 4 ನೇ ಆರೋಪಿತರು ನನ್ನ ತಮ್ಮಂದಿರು, 5 ಮತ್ತು 6 ನೇ ಆರೋಪಿತರು ನನ್ನ ಅಕ್ಕಂದಿರು, 7 ನೇ ಆರೋಪಿ ನನ್ನ ಮಾವ. 01.11.2018 ರಂದು ಖಾಜಿ ಕಾಲೋನಿ ಅಂಜುಮನ್ ಶಾಹಿಯಲ್ಲಿ ಮದುವೆಯಾಗಿರುತ್ತದೆ. ನನ್ನ ಹೆಂಡತಿ ಕೇವಲ 15 ದಿನ ನನ್ನ ಜೊತೆಯಲ್ಲಿ ಇದ್ದಳು. ನಂತರ ತನ್ನ ತವರು ಮನೆಗೆ ಹೋಗಿರುತ್ತಾಳೆ, ನಾನು ಕರೆದರು ಸಹ ಬಂದಿರುವುದಿಲ್ಲ. ನಂತರ ನನ್ನ ಹಿರಿಯರು ಹೋಗಿ ಕರೆದುಕೊಂಡು ಬಂದಿರುತ್ತಾರೆ. ನನ್ನ ಜೊತೆಯಲ್ಲಿ ಒಂದೇ ದಿನ ಇದ್ದು ನಂತರ ಯಾರಿಗೂ ಹೇಳದೆ ಕೇಳದೇ ಹೋಗಿರುತ್ತಾಳೆ. ನಂತರ ಚಾಸಾ-1 ರವರ ತಂದೆ, ಮಾಮ, ಅಣ್ಣ ಹಾಗೂ ಇನ್ನೂ ಇಬ್ಬರು ಮೂವರು ಖಾಜಿ ಹತ್ತಿರ ಬಂದು ನನ್ನನ್ನು ಕರೆದಿರುತ್ತಾರೆ. ಖಾಜಿಯವರು ನನ್ನ ಹೆಂಡತಿಯನ್ನು ಕರೆದುಕೊಂಡು ಹೋಗಲು ಹೇಳಿರುತ್ತಾರೆ ಆದರೆ ಅವಳು ಬರುವುದಿಲ್ಲ ನನಗೆ ವಿಚ್ಚೇದನ(ಖುಲ್ಲಾ) ಬೇಕು ಎಂದು ಹೇಳಿರುತ್ತಾಳೆ. ದಿನಾಂಕ: 12.10.2021 ರಲ್ಲಿ ಖುಲ್ಲಾ ಆಗಿರುತ್ತದೆ, ವರದಕ್ಷಿಣೆಯಲ್ಲಿ ಕೊಟ್ಟಂತಹ ಸಾಮಾನುಗಳನ್ನು ವಾಪಸ ಪೈದಿರುತ್ತಾರೆ. ನಾನು ಚಿನ್ನ, ಬೆಳ್ಳಿ ಹಾಗೂ ನಗದು ಹಣ ವಾಸಪ್ ಮಾಡಿರುತ್ತೇನೆ. ನಾನು ಖುಲ್ಲಾ ಪಡೆದು ರೂ.1 ಲಕ್ಷ ಕೊಟ್ಟಿರುತ್ತೇನೆ.

ಖಾಜಿಯವರು ದಿನಾಂಕಃ 12.10.2021 ರಿಂದ ಚಾಸಾ-1 ರವರಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಹೇಳಿರುತ್ತಾರೆ. ಖಾಜಿಯವರು ಖುಲ್ಲಾ ಆದ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತಾರೆ. ಖುಲ್ಲಾ ಆದ 4-5 ತಿಂಗಳ ನಂತರ ನನ್ನ ವಿರುದ್ದ ಖಾಸಗಿ ದೂರನ್ನು ಸಲ್ಲಿಸಿರುತ್ತಾಳೆ.

**<u>ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ. ಶಹಾಪೂರ**